


ಹೊರತೆಗೆದು, ಅದನ್ನು ಸುತ್ತಿದ್ದ ಪೇಪರನ್ನು ಮುದ್ದೆ ಮಾಡಿ ಬದಿಯಲ್ಲಿಟ್ಟು 'ನನಗೆ ಒಂದು ಬಲಮುರಿ ಶಂಖ ಸಿಕ್ಕಿದೆ ಭಟ್ರೇ, ತೋರಿಸಿ ಹೋಗೋಣ ಎಂದು ಬಂದೆ!' ಎಂದು ಸ್ವರ್ಗ ಗೆದ್ದವರಂತೆ ನಗುತ್ತಾ ಸಣ್ಣ ಮಗುವಿನ ಮುಷ್ಟಿಯಷ್ಟು ಗಾತ್ರದ ಆ ಬಲಮುರಿ ಶಂಖವನ್ನು ಶಂಭಟ್ಟರಾಚೆ ಚಾಚಿದರು. ಶಂಭಟ್ಟರು ಬಲಮುರಿ ಶಂಖವನ್ನು ಹಿಡಿದು ಪರೀಕ್ಷಿಸುವಂತೆ ಹಿಂದೆ ಮುಂದೆ ನೋಡಿ 'ಇದು ಅಪ್ಪಟ ಬಲಮುರಿ ಶಂಖ ಮಾರಾಯ!' ಎನ್ನುತ್ತಾ 'ಇಂಥದ್ದು ಸಿಗಲಿಕ್ಕೆ ಅದೃಷ್ಟ ಬೇಕು' ಎಂದು ಮರಳಿ ಅದನ್ನು ಈಶ್ವರ ಭಟ್ಟರ ಕೈಗೊಪ್ಪಿಸಿ 'ಎಲ್ಲಿ ಸಿಕ್ಕಿತು ಇದು? ಎಷ್ಟು ಕೊಟ್ಟಿರಿ?" ಎಂದು ಅದರ ಪೂರ್ವಾಪರ ವಿಚಾರಿಸಲು ಮುಂದಾದರು. ಈಶ್ವರ ಭಟ್ಟರು ಶಂಭಟ್ಟರು ಅದನ್ನು 'ಅಪ್ಪಟ ಬಲಮುರಿ ಶಂಖ' ಎಂದು ಹೇಳಿದ್ದರಿಂದ, ಇಂಥ ವಸ್ತು ಸೀತಾಪುರದಲ್ಲಿ ತನ್ನೊಬ್ಬನಲ್ಲೇ ಇರುವುದೆಂದು ಬೀಗಿ 'ಅದು ನನ್ನ ಭಾವ ಕಾಶಿಗೆ ಹೋದವನು ತಂದದ್ದು ಭಟ್ರೇ. ಐದು ಸಾವಿರ ರೂಪಾಯಿ ಎಂದನಂತೆ ವ್ಯಾಪಾರಿ. ಆದರೆ ನನ್ನ ಭಾವ ಅರೆಂಜಿ ಅರೆಂಜಿ (ಚರ್ಚೆ ಮಾಡಿ ಮಾಡಿ) ನಾಲ್ಕು ಸಾವಿರ ರೂಪಾಯಿ ಕೊಟ್ಟು ತಂದ' ಎಂದರು.

ಶಂಭಟ್ಟರು 'ನಾಲ್ಕಲ್ಲ. ಆರು ಸಾವಿರ ರೂಪಾಯಿ ಕೊಟ್ಟರೂ ಕಡಿಮೆಯೇ! ಒಳ್ಳೆದಾಯಿತು!' ಎಂದು ನಗುತ್ತಾ 'ನನಗೆ ಈಗ ಜರೂರು ಹೊರಗೆ ಹೋಗಬೇಕಾಗಿದೆ' ಎಂದು ಮೇಲೆದ್ದರು. ಅಷ್ಟರಲ್ಲಿ 'ಹೌದಾ?' ಎಂದು ಮೇಲೆದ್ದು ನಿಂತ ಈಶ್ವರ ಭಟ್ಟರು 'ಬಲಮುರಿ ಶಂಖ ಮನೆಗೆ ಬಂದ ಬಾಬ್ತು– ಆ ಶಂಖದಲ್ಲೇ ಒಂದು ಶತರುದ್ರಾಭಿಷೇಕ ಮಾಡಿಸಬೇಕು ಎಂದು ಸಂಕಲ್ಪ ಮಾಡಿದ್ದೇನೆ ಭಟ್ರೇ. ಅದಕ್ಕೆ ನಿಮ್ಮ ಬಿಡುವು ಯಾವಾಗ ಎಂದು ಹೇಳಿದರೆ ಉಪಕಾರ ಇತ್ತು' ಎಂದು ಮತ್ತೆ ಕೈ ಮುಗಿದರು. ಶಂಭಟ್ಟರು 'ಈಗ 'ದಿನ ನೋಡಿ' ಹೇಳುವುದು ಕಷ್ಟ! ನಿಮ್ಮ ಜನ್ಮ ನಕ್ಷತ್ರಕ್ಕೆ ಯಾವಾಗ ಕೂಡಿ ಬರುತ್ತದೆ ಎಂದು ಹೇಳಬೇಕಾದರೆ, ನಾಳೆ ಸಂಜೆ ಬನ್ನಿ" ಎಂದು ಹೇಳುತ್ತಾ ಮತ್ತೆ ಮಾತಿಗೆ ಅವಕಾಶ ಇಲ್ಲದಂತೆ ಒಳನಡೆದರು.

ಈಶ್ವರ ಭಟ್ಟರು ಮರುದಿನ ಸಂಜೆ ಶಂಭಟ್ಟರನ್ನು ಭೇಟಿಯಾದರು.

